ಬಂದಿದೆ. ಮೊನ್ನೆ ಸೋಮವಾರ ದಿವಸ ಹಿಂದಿನ ರೀತಿಯಲ್ಲಿ ರೈತ ಕಾರ್ಮಿಕರ ಮೇಲೆ ಧಾಳಿಯನ್ನು ಮಾಡಿದ್ದಾರೆ, ಆಗ ನಾನು ಮತ್ತು ಪೋಲಿಸ್ ಅಧಿಕಾರಿಗಳು ಆ ಸ್ಥಳಕ್ಕೆ ಹೋಗಿ ನೋಡಲಾಗಿ, ಅಲ್ಲಿ ಎಂಪಿಎಂ, ಅರಣ್ಯ ಇಲಾಖೆಯಲ್ಲಿ ಕೆಲಸ ಮಾಡುವವರೆಲ್ಲರೂ ಗೂಂಡಾಗಳನ್ನು ನೇಮಕಮಾಡಿ ಕೊಂಡಿದ್ದಾರೆ, ಅವರು ನಾನು ಸರ್ಕಾರಿ ಇಷ್ಟು ಬಸ್ಸುಗಳನ್ನು ಸುಟ್ಟಿದ್ದೇನೆ ಅಷ್ಟು ಬಸ್ಸ್‌ಗಳನ್ನು ಸುಟ್ಟಿದ್ದೇವೆ ಯಾರೇ ಬರಲಿ ಅವರ ಕೈ-ಕಾಲುಗಳನ್ನು ಮುರಿಯುತ್ತೇವೆ, ಯಾವ ಶಾಸಕರು ಏನು ಮಾಡುತ್ತಾರೆ ಮಾಡಿಕೊಳ್ಳಲಿ ನಾವು ನೋಡಿಕೊಳ್ಳುತ್ತೇವೆ ಎಂದು ಹೇಳುತ್ತಾರೆ. ನಮ್ಮಲ್ಲಿ ಇರುವ ಎಲ್ಲಾ ದಾಖಲೆಗಳನ್ನು ಕೊಟ್ಟರು ನಮ್ಮಲ್ಲಿ ಇರತಕ್ಕಂತಹ ಜಿಲ್ಲಾಧಿಕಾರಿಗಳು, ವರಿಷ್ಠ ಅಧಿಕಾರಿಗಳು, ಪೋಲಿಸ್ ಅಧಿಕಾರಿಗಳು ಎಲ್ಲರೂ ಅವರ ಜೊತೆ ಕೂಡಿಕೊಂಡು ಎಂಪಿಎಂಗೆ ಎಲ್ಲ ಸೇರಬೇಕು, ಇಲ್ಲಿಯ ರೈತರಿಗೆ ಏನು ಇಲ್ಲ ಎಂದು ಹೇಳುತ್ತಾರೆ. ಮಂಜೂರು ಆಗಿರುವ ದಾಖಲೆ ಪತ್ರಗಳು ಎಲ್ಲವೂ ನಮ್ಮಲ್ಲಿ ಇವೆ. ಇವರಲ್ಲಿ ಪಹಣಿ ಪಟ್ಟಾ ಎಲ್ಲಾ ಇದೆ, ಈಗ ಅವರು ಫಾರ್ಮ ನಂ 50ನ್ನು ಹಾಕಿ ಬಗರ್ ಹುಕುಂ ಸಮಿತಿಗೆ ಅರ್ಜಿಯನ್ನು ಸಲ್ಲಿಸಿರುವುದು ಇದೆ. ಅಲ್ಲಿ ಇರತಕ್ಕಂತಹ ಸುಮಾರು 435 ಎಕರೆ ಜಮೀನಿನಲ್ಲಿ ಈಗಾಗಲೆ 100 ಎಕರೆ, 50 ಎಕರೆ ಎಂಪಿಎಂಗೆ ಕೊಟ್ಟಿದ್ದಾರೆ. ಅಲ್ಲಿ ಇರುವ ರೈತರನ್ನು ಹೊರಗೆ ಹಾಕಿ ಅಲ್ಲಿತಮ್ಮ ಕೆಲಸವನ್ನು ಮಾಡಲು ಹೋದಾಗ ಅಲ್ಲಿಯ ಜನರು ಪ್ರತಿಭಟನೆ ಮಾಡಿದಕ್ಕೆ ಅವರೆ ಮೇಲೆ ದಬ್ಬಾಳಿಕೆ ಮಾಡಿದ್ದಾರೆ. ದಬ್ಬಾಳಿಕೆ ಮಾಡಿದ ಬಗ್ಗೆ ಕೇಸ್ ದಾಖಲಾಗಿದೆ. ಸಂಬಂಧಪಟ್ಟ ಅರಣ್ಯ ಇಲಾಖೆಯ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ತೆಗದುಕೊಳ್ಳಬೇಕು ಎಂದು ತಮ್ಮ ಮೂಲಕ ಸರ್ಕಾರವನ್ನು ವಿನಂತಿಮಾಡಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಉಪಾಧ್ಯಕ್ಷರೆ, ಸಾಗುವಳಿ ಚೀಟಿಯನ್ನು ಕೊಟ್ಟು ರೈತರ ಖಬ್ಜಾದಲ್ಲಿ ಜಮೀನು ಇರುವಂತಹ ಸಂದರ್ಭದಲ್ಲಿ, ರೈತರಿಗೆ ಯಾವುದೇ ತೊಂದರೆಯನ್ನು ಮಾಡಲು ನಾವು ಅವಕಾಶ ಮಾಡಿಕೊಡುವುದಿಲ್ಲ. ಅರಣ್ಯ ಅಧಿಕಾರಿಗಳು ತಪ್ಪುಮಾಹಿತಿಯಿಂದ ಅಥವಾ ತಮ್ಮ ಅತಿ ಹೆಚ್ಚು ಉತ್ಸಾಹದಿಂದ ರೈತರಿಗೆ ವಿನಾ ಕಾರಣ ತೊಂದರೆ ಕೊಡುತ್ತಾ ಇದ್ದರೆ, ಖಂಡಿತವಾಗಿ ಇದಕ್ಕೆ ಕಡಿವಾಣ ಹಾಕುತ್ತೇವೆ. ಜಿಲ್ಲಾಧಿಕಾರಿಗಳ ಜೊತೆ ಈ ವಿಷಯವನ್ನು ಪ್ರಸ್ತಾಪ ಮಾಡಿ ಅರಣ್ಯ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳಲು ಆದೇಶವನ್ನು ಕೊಡುತ್ತೇವೆ.

ಹೊಸಕೋಟೆ ತಾಲ್ಲೂಕಿನ ಆಲಪನಹಳ್ಳಿಯಲ್ಲಾದ ಗಲಾಟೆ ಬಗ್ಗೆ

+ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಸನ್ಮಾನ್ಯ ಉಪಾಧ್ಯಕ್ಷರೇ, ದಿನಾಂಕ 16.2.98ರಂದು ಅಂದರೆ ಲೋಕಸಭಾ ಚುನಾವಣೆಯ ದಿವಸ ಹೊಸಕೋಟೆ ತಾಲ್ಲೂಕಿನ ಆಲಪನಹಳ್ಳಿಯಲ್ಲಿ ದೊಡ್ಡ ಗಲಾಟೆಯಾಗಿದೆ. ರಾಜಕೀಯ ಪಕ್ಷದ ಗುಂಪುಗಳು ಎಂದು ತಿಳಿದುಕೊಳ್ಳೋಣ. ಕಾಂಗ್ರೆಸ್ ಪಕ್ಷ ಮತ್ತು ಜನತಾ ದಳ ಗುಂಪುಗಳ ನಡುವೆ ಗಲಾಟೆಯಾಗಿದೆ. ಎರಡೂ ಪಕ್ಷದವರು ಘರ್ಷಣೆ ಮಾಡಿಕೊಂಡಿದ್ದಾರೆ ಎಂದೆ ಪೋಲೀಸರಿಗೆ ದೂರು ಸಲ್ಲಿಸಿದರೂ ಕೂಡ ಪೋಲೀಸರು ಯಾವ ಕ್ರಮವನ್ನೂ ಜರುಗಿಸಿಲ್ಲ. ನಾನು ನೇರವಾಗಿ ಮಂತ್ರಿಗಳು ಅದರಲ್ಲಿ ಇನ್‌ವಾಲ್ವ್ ಆಗಿದ್ದಾರೆ ಎಂದು ಹೇಳಲು ಹೋಗುವುದಿಲ್ಲ. ಏಕೆಂದರೆ ಅನೇಕ ಸಾರಿ ಮಂತ್ರಿಗಳ ಹೆಸರಿನ ಮೇಲೆ ಅವರು

ಬೆಂಬಲಿಗರು ಮತ್ತು ಅವರ ಹಿಂದಿರತಕ್ಕಂಥವರು ಈ ರೀತಿ ಮಾಡಿ, ಹಿಂದೆ ದೊಡ್ಡವರಿದ್ದಾರೆ ಅವರು ನೋಡಿಕೊಳ್ಳುತ್ತಾರೆ ಎಂದು ಮಾಡತಕ್ಕಂಥ ಸಾಧ್ಯತೆ ಇರುತ್ತದೆ. ಅಲ್ಲಿ ಏನಾಗಿದೆ ಎಂದರೆ, ಮತದಾನದ ದಿವಸ, ಸಾಯಂಕಾಲ ಮತದಾನ ಮುಗಿದು ಸೀಲ್ ಮಾಡಿಕೊಂಡು ಹೋಗುವಾಗ ಜನತಾದಳದ ಕೆಲವು ಜನ ಪ್ರಮುಖರು ಅಲ್ಲಿನವರನ್ನು ಅಟ್ಯಾಕ್ ಮಾಡಿ, ಮನೆಗೆ ನುಗ್ಗಿದ್ದಾರೆ. ಅವರು ಎಲ್ಲಿಯವರೆಗೆ ಹೋಗಿದ್ದಾರೆ ಎಂದರೆ ಯಾರ್ಯಾರು ಕಾಂಗ್ರೆಸ್ ಪಕ್ಷಕ್ಕೆ ಬೆಂಬಲ ನೀಡಿದ್ದರು ಅಂಥವರ ಪಂಪ್‌ಸೆಟ್ಟುಗಳನ್ನು ಗುರುತಿಸಿ ಅವರ ಪಂಪ್‌ಸೆಟ್ಟುಗಳಿಗೆ ಕಲ್ಲು ಹಾಕಿದ್ದಾರೆ, ಅವರ ಜೀಪು, ಮೋಟಾರ್ ಸೈಕಲ್‌ಗಳನ್ನು ತೆಗೆದುಕೊಂಡು ಹೋಗಿದ್ದಾರೆ, ಟ್ಯಾಕ್ಟರ್‌ಗಳನ್ನು ಹಾಳು ಮಾಡಿದ್ದಾರೆ, ಟೇಪ್‌ರೆಕಾರ್ಡ್‌ಗಳನ್ನು ತೆಗೆದುಕೊಂಡು ಹೋಗಿದ್ದಾರೆ, ಮನೆಯಲ್ಲಿರತಕ್ಕಂಥ ಅಲ್ಮೈರಾಗಳನ್ನು ತೆಗೆದು ಅದರಲ್ಲಿರತಕ್ಕಂಥ ಬಂಗಾರ ಮತ್ತು ಹಣವನ್ನೂ ಕೂಡ ತೆಗೆದುಕೊಂಡು ಹೋಗಿದ್ದಾರೆ. ನಾನು ಸ್ವತಃ ಆ ಊರಿಗೆ ಹೋಗಿದ್ದೆ. ಈ ರೀತಿ ಆಗಿರುವವರ ಲಿಸ್ಟನ್ನೂ ನಾನು ಕೊಡುತ್ತೇನೆ. ಕೆಂಪಣ್ಣ ಬಿನ್ ದೊಡ್ಡಪ್ಪಾಜ್ಜಿ, ಮುನಿರಾಜಪ್ಪ ಬಿನ್ ಮುನಿಶಾಮಪ್ಪ, ಸೊನ್ನಪ್ಪ ಬಿನ್ ಚಿಕ್ಕನಂಜಪ್ಪ, ಬಸಪ್ಪ ಬಿನ್ ಗಿಡ್ಡಪ್ಪ, ತಮ್ಮಣ್ಣ ಬಿನ್ ಪಿಳ್ಳಮುನಿಯಪ್ಪ, ವೆಂಕಟಪ್ಪ ಬಿನ್ ಚಿಕ್ಕಣ್ಣ, ಪಿಳ್ಳಮ್ಮ ಮುನಿಯಪ್ಪ, ಜಯರಾಂ ಬಿನ್ ಕೆಂಪಣ್ಣ, ಕೆಂಪಮ್ಮ ಬಿನ್ ಉಪ್ಪಾರಹಳ್ಳಿ ಕೆಂಪಣ್ಣ. ಹೀಗೆ ಸುಮಾರು 10-11 ಜನರ ಮನೆಗಳು ಅಲ್ಲಿ ಲೂಟಿಯಾಗಿವೆ. ಇಲ್ಲಿಯವರೆಗೆ ಪೋಲೀಸರು ಯಾವ ಕ್ರಮವನ್ನೂ ಕೂಡ ಕೈಗೊಂಡಿಲ್ಲ. ಈ ಹಳ್ಳಿ ಸಿಟಿಯಿಂದ ಬಹಳ ದೂರದಲ್ಲೇನೂ ಇಲ್ಲ, ಹೊಸಕೋಟೆಯಿಂದ4-5 ಕಿ.ಮೀ. ದೂರದಲ್ಲಿ ಈ ಊರು ಇದೆ. ಆ ಊರಿನಲ್ಲಿ ಇಂಥ ಒಂದು ದೊಡ್ಡ ಗಲಾಟೆಯಾಗಿದೆ. ಅಲ್ಲಿ ಕಳ್ಳತನವಾದಂಥ ಸಾಮಾನುಗಳು ಇಲ್ಲಿಯವರೆಗೆ ರೆಕವರಿಯಾಗಿಲ್ಲ ಎಂದರೆ ಪೋಲೀಸಿನವರು ಯಾವ ವ್ಯವಸ್ಥೆಯಲ್ಲಿ ಕೆಲಸ ಮಾಡುತ್ತಿದ್ದಾರೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಇದಕ್ಕೆ ಏನು ಕಾರಣ? ಯಾರ ಒತ್ತಡ ಇದೆ? ಇದರ ಇನ್‌ವೆಸ್ಟಿಗೇಷನ್ ಮಾಡುವುದಕ್ಕಾಗಲೀ, ಕಳ್ಳತನವಾಗಿರುವಂಥ ಸಾಮಾನುಗಳನ್ನು ಸೀಜ್ ಮಾಡುವುದಕ್ಕಾಗಲೀ ಅಥವಾ ಪತ್ತೆ ಹಚ್ಚುವುದಕ್ಕಾಗಲೀ ಯಾರದಾದರೂ ಒತ್ತಡ ಇದೆಯೇ? ಇದು ನಡೆದು ಸುಮಾರು ಒಂದು ತಿಂಗಳ ಮೇಲೆ ಆಗಿದೆ, ಒಂದು ತಿಂಗಳಾಗಿ10-15 ದಿವಸವಾಗಿದೆ. ಇದನ್ನು ಪತ್ತೆ ಹಚ್ಚಬೇಕಲ್ಲಾ. ಇವತ್ತಿಗೂ ಕೂಡ ಪತ್ತೆ ಹಚ್ಚುವ ಕೆಲಸವನ್ನು ಮಾಡುತ್ತಿಲ್ಲವೆಂದರೆ ಹೇಗೆ? ಮಂತ್ರಿಗಳು ಸ್ವತಃ ಆ ಊರಿಗೆ ಭೇಟಿ ಕೊಟ್ಟರೆ ಯಾವರೀತಿಯಾಗಿ ಅಲ್ಲಿ ಇದು ನಡೆಯಿತು ಎನ್ನತಕ್ಕಂಥಾದ್ದನ್ನು ಜನ ಹೇಳುತ್ತಾರೆ. ಯಾರು ಯಾರಿಗೆ ಹೊಡೆದರು ಎನ್ನುವುದನ್ನು ನಾನು ಹೇಳುವುದಿಲ್ಲ. ಯಾರು ತಪ್ಪಿತಸ್ಥರಿದ್ದಾರೆ, ಅವರ ಮೇಲೆ ನೀವು ಕ್ರಮ ತೆಗೆದುಕೊಳ್ಳಿ. ಆದರೆ ಯಾರು ಮುಗ್ಧ ಜನರಿದ್ದಾರೆ, ಅವರ ಮನೆಗಳನ್ನು ಹೊಕ್ಕು, ನೀವು ಯಾರಿಗೆ ಓಟು ಕೊಟ್ಟಿರಿ, ಯಾರಿಗೆ ಕೊಟ್ಟಿಲ್ಲ, ನಮ್ಮ ಊರಿನಲ್ಲಿ ಒಗ್ಗಟ್ಟಾಗಿ ಇರಬೇಕಾಗಿತ್ತು, ಇದರಲ್ಲಿ ಏಕೆ ಒಡಕು ಮಾಡಿಕೊಂಡಿರಿ ಎಂದು ಪ್ರಭಾವವನ್ನು ಬೀರ ಮತಗಳನ್ನುಗಳಿಸಬೇಕು ಎನ್ನುವ ದೃಷ್ಟಿ ಇಟ್ಟುಕೊಂಡು ಊರಿಗಳಲ್ಲಿ ಜಗಳ ಪ್ರಾರಂಭಿಸುತ್ತಾ ಹೋದರೆ ಎಲ್ಲಿಯೂ ಸರಿಯಾದ ಚುನಾವಣೆಗಳು ಆಗುವುದಿಲ್ಲ. ದಯವಿಟ್ಟು ನೀವು ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ಮತ್ತು ಅಲ್ಲಿ ತಕ್ಷಣ ಕ್ರಮವನ್ನು ತೆಗೆದುಕೊಳ್ಳದೇ ಇರತಕ್ಕಂಥ ಹೊಸಕೋಟೆಯ ಪೋಲೀಸ್ ಅಧಿಕಾರಿಯಾದ ಸರ್ಕಲ್ ಇನ್ಸ್‌ಪೆಕ್ಟರ್ ಯಾರಿದ್ದಾರೆ, ಅವರ ಮೇಲೆ

ಏನು ಕ್ರಮ ತೆಗೆದುಕೊಂಡಿದ್ದೀರಿ? ಏಕೆಂದರೆ ಅವರು ನಿಮಗೂ ಒಂದು ಅರ್ಜಿ ಕೊಟ್ಟಿದ್ದಾರೆ, ಸರ್ಕಾರಕ್ಕೂ ಒಂದು ಅರ್ಜಿ ಕಳುಹಿಸಿಕೊಟ್ಟಿದ್ದಾರೆ. ಈ ಬಗ್ಗೆ ಜಾಫರ್ ಷರೀಫ್‌ರವರೂ ದೂರವಾಣಿ ಮುಖಾಂತರ ಮಾತನಾಡಿರಬಹುದು. ನಾನು ಇಲ್ಲಿ ಇದನ್ನು ರಾಜಕೀಯ ದೃಷ್ಟಿಯಿಂದ ಪ್ರಸ್ತಾಪ ಮಾಡುತ್ತಿಲ್ಲ. ಹಳ್ಳಿಗಳಲ್ಲಿ ಬಡವರು ಮತ ಚಲಾಯಿಸಬೇಕಾದರೆ ಅವರಿಗೆ ಧೈರ್ಯ ಬರಬೇಕು. ಅವರು ಬಿಜೆಪಿ ಗಾದರೂ ಹಾಕಲಿ, ಕಾಂಗ್ರೆಸ್ಸಿಗಾದರೂ ಹಾಕಲಿ, ಜನತಾದಳಕ್ಕಾದರೂ ಹಾಕಲಿ, ಯಾವ ಪಕ್ಷಕ್ಕಾದರೂ ಹಾಕಲಿ, ಅವರಿಗೆ ಇಷ್ಟಬಂದಂಥ ಪಕ್ಷಕ್ಕೆ ಹಾಕಲಿ. ಅವರ ಮೇಲೆ ಪ್ರಭಾವ ಬೀರತಕ್ಕಂಥಾದ್ದು, ಒತ್ತಡ ತರತಕ್ಕಂಥಾದ್ದು, ದಬ್ಬಾಳಿಕೆ ನಡೆಸತಕ್ಕಂಥಾದ್ದು ಇನ್ನಾದರೂ ನಿಲ್ಲಬೇಕು. ಇನ್ನಾದರೂ ಪಾಳೆಗಾರಿಕೆತನ ಪ್ರಜಾಪ್ರಭುತ್ವದಲ್ಲಿ ನಡೆಯಬಾರದು. ಇಲ್ಲದಿದ್ದರೆ ನಾಳೆ ಯಾರೂ ಕೂಡ ಮತಗಟ್ಟೆಗಳಿಗೆ ಹೋಗುವುದಿಲ್ಲ. ಯಾಕಪ್ಪಾ ಕಿರಿಕಿರಿ, ಮತಗಟ್ಟೆಗೆ ಹೋಗಿ ಯಾಕಪ್ಪಾ ಕೈಕಾಲು ಮುರಿಸಿಕೊಳ್ಳೋಣ, ಪೆಟ್ಟು ತಿಂದು ಬರೋಣ ಎಂದು ಯಾರೂ ಮತಗಟ್ಟೆಗೆ ಹೋಗುವುದಿಲ್ಲ. ಆದಕ್ಕಾಗಿ ನೀವು ಇದರ ಬಗ್ಗೆ ಏನು ಕ್ರಮವನ್ನು ಜರುಗಿಸಿದ್ದೀರಿ ಎಂದು ಕೇಳುತ್ತಿದ್ದೇನೆ. ಕೆಂಪಣ್ಣ ಎನ್ನುವವರ ಮನೆಯಿಂದ ಸುಮಾರು 80 ಸಾವಿರ ರೂಪಾಯಿ ಬೆಲೆ ಬಾಳತಕ್ಕಂಥ ಸಾಮಾನುಗಳು ಹೋಗಿವೆ. ಮುನಿಯಪ್ಪ ಎನ್ನುವವರ ಮನೆಯಿಂದ ಸುಮಾರು40,700 ರೂಪಾಯಿಗಳ ಸಮಾನುಗಳು ಹೋಗಿವೆ ಮತ್ತು 12 ಕುರಿಗಳನ್ನೂ ಹೊಡೆದುಕೊಂಡು ಹೋಗಿದ್ದಾರೆ. ಇದುವರೆಗೆ ಕುರಿಗಳೂ ಪತ್ತೆ ಇಲ್ಲ. ತಮ್ಮಣ್ಣ ಎನ್ನುವವರ ಮನೆಯಿಂದ ಸುಮಾರು 60 ಸಾವಿರ ರೂಪಾಯಿ ಬೆಲೆ ಬಾಳುವ ಚಿನ್ನದ ಒಡವೆಗಳನ್ನು ತೆಗೆದುಕೊಂಡು ಹೋಗಿದ್ದಾರೆ. ಹೀಗೆ ದನಗಳು, ಕುರಿಗಳು, ಬಂಗಾರ, ಬೆಳ್ಳಿ ಎಲ್ಲವನ್ನೂ ದೋಚಿಕೊಂಡು ಹೋಗಿದ್ದಾರೆ. ಆದರೂ ಇವತ್ತು ಅದರ ಬಗ್ಗೆ ವಿಚಾರಣೆ ಇಲ್ಲ, ಕಳ್ಳತನವಾದ ವಸ್ತುಗಳ ಸೀಜ್ ಇಲ್ಲ, ಯಾವ ರೀತಿಯಿಂದಲೂ ಕೂಡ ಕ್ರಮವನ್ನು ಜರುಗಿಸಿಲ್ಲ. ಆದಕ್ಕಾಗಿ ದಯವಿಟ್ಟು ಸರ್ಕಾರ ಇದರ ಬಗ್ಗೆ ಏನು ಕ್ರಮವನ್ನು ತೆಗೆದುಕೊಂಡಿದೆ, ಕಳೆದುಕೊಂಡ ಮಾಲನ್ನು ಜಪ್ತಿ ಮಾಡಲು ಸರ್ಕಾರ ಯಾವ ರೀತಿ ಆಸಕ್ತಿ ವಹಿಸಿದೆ ಎನ್ನುವುದನ್ನು ತಿಳಿಸಬೇಕು ಮತ್ತು ಯಾವ ಅಧಿಕಾರಿ ಇದರಲ್ಲಿ ಲೋಪದೋಷವನ್ನೆಸಗಿದ್ದಾನೆ, ಅವನ ಮೇಲೆ ತಾವು ಏನು ಶಿಸ್ತು ಕ್ರಮ ತೆಗೆದುಕೊಂಡಿದ್ದೀರಿ ಎನ್ನುವುದನ್ನೂ ಕೂಡ ಹೇಳಬೇಕು.

ಶ್ರೀ ಆರ್. ರೋಷನ್ ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು) : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರಾದ ಮಲ್ಲಿಕಾರ್ಜುನ ಖರ್ಗೆಯವರು ಹೊಸಕೋಟೆ ತಾಲ್ಲೂಕಿನ ಅಲಪನಹಳ್ಳಿಯಲ್ಲಿ ನಡೆದಂಥ ಘಟನೆಗಳ ಬಗ್ಗೆ ಹೇಳಿದ್ದಾರೆ. ಚುನಾವಣೆ ಸಮಯದಲ್ಲಿ ಈ ರೀತಿಯ ಘಟನೆಗಳು ನಡೆದಿವೆ. This is one stray incident. I hope the Hon'ble Leader of the Opposition will agree that in the entire State of Karnataka as far as possible we have tried to maintain law and order. Hats off to my police officers in the entire State except here and there, there was no law and order problem. ಮಹಾರಾಷ್ಟ್ರ, ಉತ್ತರ ಪ್ರದೇಶ ಮತ್ತು ಬಿಹಾರ ರಾಜ್ಯಗಳಿಗೆ ಹೋಲಿಸಿಕೊಂಡರೆ, ನಮ್ಮ ರಾಜ್ಯದಲ್ಲಿ

ಪೋಲೀಸ್ ಇಲಾಖೆಯಿಂದ ಬಹಳ ಫೇರ್ ಅಂಡ್ ಫ್ರೀ ಎಲೆಕ್ಷನ್‌ಗಳಾಗಬೇಕು ಎಂದು ನಾವು ಪ್ರಯತ್ನಪಟ್ಟು ಅದರಲ್ಲಿ ಸಫಲರಾಗಿದ್ದೇವೆ. ನಡೆದಿರುವ ಈ ಘಟನೆಯ ಬಗ್ಗೆ ಜಾಫರ್ ಷರೀಫ್‌ರವರೂ ಕೂಡ ಇದರ ಬಗ್ಗೆ ನನ್ನ ಹತ್ತಿರ ಮಾತನಾಡಿದರು. ಜಾಫರ್ ಷರೀಫ್‌ರವರೂ ಕೂಡ ಒಬ್ಬ ಪರ್ಟಿಕ್ಯುಲರ್ ಆಫೀಸರ್ ಅಲ್ಲಿ ಬೇಡ, ಅದರಿಂದ ನನಗೆ ಸಂಶಯ ಬರುತ್ತದೆ ಎಂದು ಹೇಳಿದ ಮೇಲೆ on the suggestion of Mr. Jaffer Shariff, one additional S.P. was placed incharge of that entire area. ಹೊಸಕೋಟೆಯಾದ ಮೇಲೆ ಯಾವಯಾವ ಪೋಲಿಂಗ್ ಬೂತ್‌ಗಳು ಬರುತ್ತವೆ ಅಲ್ಲಿಗೆ ಹಾಕಿದ್ದೇವೆ. ಮಾನ್ಯ ಜಾಫರ್ ಷರೀಫ್‌ರವರು ಪೋಲಿಂಗ್ ಬೂತ್‌ಗಳ ಒಂದು ಲಿಸ್ಟನ್ನೂ ಸಹ ಕೊಟ್ಟರು ಎಲ್ಲೆಲ್ಲಿ ಗಲಾಟೆಯಾಗಬಹುದು ಎಂದು ಅವರಿಗೆ ಅನುಮಾನವಿತ್ತು ಅಂಥ ಪೋಲಿಂಗ್ ಸ್ಟೇಷನ್‌ಗಳ ಲಿಸ್ಟನ್ನು ಕೊಟ್ಟರು. ಅಂಥ ಕಡೆಗಳಲ್ಲಿ ನಾವು ವಿಶೇಷ ಮುನ್ನೆಚ್ಚರಿಕೆಯನ್ನು ತೆಗೆದುಕೊಂಡು, ಡಿಜಿಪಿಯವರಾದ ಶ್ರೀನಿವಾಸುಲು ಮತ್ತು ನಾವುಗಳು ಕುಳಿತುಕೊಂಡು ಯಾವ ರೀತಿ ಫ್ರೀ ಅಂಡ್ ಫೇರ್ ಎಲೆಕ್ಷನ್ ಮಾಡಬಹುದು ಎಂದು ಯೋಚನೆ ಮಾಡಿ ಅದರಂತೆ ಪ್ರಯತ್ನ ಪಟ್ಟಿದ್ದೇವೆ. ಅದು ಮಾನ್ಯ ಜಾಫರ್ ಷರೀಫ್‌ರವರಿಗೂ ಗೊತ್ತಿದೆ. ಆದರೂ ಕೊನೆಯಲ್ಲಿ ಈ ಅನಿರೀಕ್ಷಿತ ಘಟನೆಯಾಗಿದೆ. ಕೃಷ್ಣಪ್ಪ ಎನ್ನುವವರು ಒಂದು ಕಡೆ, ಮುನಿರಾಜು ಎನ್ನುವವರು ಒಂದು ಕಡೆ ಇದ್ದರೆಂದು ನನಗೆ ತಿಳಿದು ಬಂದಿದೆ. ಮುನಿರಾಜು ಕಾಂಗ್ರೆಸ್(ಐ) ನ ಬೆಂಬಲಿಗರು, ಕೃಷ್ಣಪ್ಪ ಜನತಾದಳದ ಬೆಂಬಲಿಗರು. ಇವರಿಬ್ಬರೂ ಜಗಳ ಮಾಡಿಕೊಂಡಿದ್ದಾರೆ. ತಾವು ಏನು ಹೇಳಿದ್ದೀರಿ, ತಮ್ಮಣ್ಣನವರ ಮನೆಯಿಂದ, ಕೆಂಪಣ್ಣನವರ ಮನೆಯಿಂದ 40 ಸಾವಿರ, 60 ಸಾವಿರ, 70 ಸಾವಿರ ಬೆಲೆಬಾಳುವ ವಸ್ತುಗಳನ್ನೆಲ್ಲಾ ಲೂಟಿಮಾಡಿಕೊಂಡು ಹೋಗಿದ್ದಾರೆ ಎಂದು ಏನು ಹೇಳಿದ್ದೀರಿ ಅದು ನಿಜ. ಇದರ ಬಗ್ಗೆ ಒಂದು ಎನ್‌ಕ್ವೈರಿ ಕಂಡಕ್ಟ್ ಮಾಡಿ ಎಂದು ಏರಿಯಾ ಡಿಐಜಿ ಯವರಿಗೆ ಹೇಳಿದ್ದೇವೆ. ಸ್ಥಳೀಯ ಪೋಲೀಸರು ಕೂಡಲೇ ಅಲ್ಲಿಗೆ ಧಾವಿಸಿ ಏಕೆ ಕೆಲವರನ್ನು ಅರೆಸ್ಟ್ ಮಾಡಿಲ್ಲ ಎಂದು ಕೇಸ್‌ಗಳನ್ನು ಬುಕ್ ಮಾಡಿದ್ದೇವೆ. ಎರಡೂ ಕಡೆಯವರ ಮೇಲೆ ಕೇಸ್‌ಗಳನ್ನು ಬುಕ್ ಮಾಡಲಾಗಿದೆ. ಜನತಾದಳದವರ ಮೇಲೆ ಕೇಸ್‌ಗಳನ್ನು ಬುಕ್ ಮಾಡಿಲ್ಲ ಎಂದೇನೂ ಇಲ್ಲ, ಅವರ ಮೇಲೂ ಕೇಸ್‌ಗಳನ್ನು ಬುಕ್ ಮಾಡಿದ್ದೇವೆ. ಅದೇ ಸಂದರ್ಭದಲ್ಲಿ ಡಿಐಜಿ ಯವರಿಂದ ಏಕೆ ಈ ರೀತಿಯ ಘಟನೆಗಳಾದವು ಎನ್ನುವ ಬಗ್ಗೆ ನಾವು ವಿಚಾರಣೆಯನ್ನೂ ನಡೆಸುತ್ತಿದ್ದೇವೆ. ಅವರ ವರದಿ ಬಂದ ಕೂಡಲೇ ಏನು ಕ್ರಮ ತೆಗೆದುಕೊಳ್ಳತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ಒಪ್ಪಿಕೊಂಡಿದ್ದಾರೆ. ಅದರ ಬಗ್ಗೆ ನನ್ನದೇನೂ ತಕರಾರಿಲ್ಲ. ದುಡ್ಡು ಹೋಗಿರುವುದು, ಮಾಲುಗಳು ಹೋಗಿರುವುದು ನಿಜ ಎಂದು ಹೇಳಿದ್ದಾರೆ. ಆದರೆ ರೆಕವರಿ ಏಕೆ ಆಗಿಲ್ಲ? ಘಟನೆ ನಡೆದು ಆಗಲೇ ಒಂದೂವರೆ ತಿಂಗಳಾಯಿತು. ಅದು ಬಹಳ ಮುಖ್ಯ. ಅದರ ಹಿಂದೆ ಯಾರಿದ್ದಾರೆ ಎಂದು ನೋಡಬೇಕು. ಆ ಊರು ಬಹಳ ದೂರವೂ ಇಲ್ಲ.

Sri R. ROSHAN BAIG : Some items have recovered. Police are looking out again for the remaining items. ಇನ್ನುಳಿದ ಐಟಂಗಳು ಏನಿವೆ, ಅವುಗಳನ್ನೂ ನಾವು ಟ್ರೇಸ್ ಮಾಡುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನನ್ನದು ಒಂದು ಮನವಿ ಇದೆ. ಇಲ್ಲೇ ಅಲ್ಲ, ಇಡೀ ಕರ್ನಾಟಕ ರಾಜ್ಯದಲ್ಲಿ ಜಿಲ್ಲಾ ಕೇಂದ್ರಗಳಲ್ಲಿ ತಾವು ದಯವಿಟ್ಟು ಕೆಳಗಿನಿಂದ ಹಿಡಿದು ಮೇಲಿನವರೆಗೆ ಒಂದೇ ಜಾತಿಯವರನ್ನು ಹಾಕಲು ಹೋಗಬೇಡಿ. ಡಿಐಜಿನೂ ಅದೇ ಕಮ್ಯುನಿಟಿ, ಎಸ್‌ಪಿ ನೂ ಅದೇ ಕಮ್ಯುನಿಟಿ, ಡಿ ವೈ ಎಸ್ ಪಿ ನೂ ಅದೇ ಕಮ್ಯೂನಿಟಿ, ಸರ್ಕಲ್ ಇನ್ಸ್‌ಪೆಕ್ಟರೂ ಅದೇ ಕಮ್ಯೂನಿಟಿ ಮತ್ತು ಸಬ್ ಇನ್ಸ್‌ಪೆಕ್ಟರ್ ಸಹಾ ಇದೇ ಕಮ್ಯುನಿಟಿ. ಈ ರೀತಿಯಾದರೆ ಹೇಗೆ? ನ್ಯಾಯ ನೀತಿ ಏನೂ ಇಲ್ಲವೇ? ಈ ರೀತಿ ಆಗಬಾರದು ಎಂದೇನೂ ಇಲ್ಲ. ಅನಿರೀಕ್ಷಿತವಾಗಿ ಎಲ್ಲೋ ಒಂದು ಕಡೆ ರೀತಿಯಾಗಿದೆ ಎಂದರೆ ನಾವು ಒಪ್ಪಿಕೊಳ್ಳುತ್ತೇವೆ. ಆದರೆ ಗೊತ್ತಿದ್ದೂ ಕೂಡ ಇಂಥ ಸೆನ್‌ಸಿಟೀವ್ ಪ್ಲೇಸ್‌ಗಳಲ್ಲಿ ಲೈನಾಗಿ ಒಂದೇ ಕಮ್ಯುನಿಟಿಯವರನ್ನೇ ಹಾಕಿದರೆ ಇದು ನಿಮ್ಮ ಆಡಳಿತಕ್ಕೆ ಶೋಭೆ ತರುತ್ತದೆಯೇ? ಕಳ್ಳತನವಾದಂಥ ಸಾಮಾನುಗಳ ರೆಕವರಿ ಏಕೆ ಆಗುತ್ತಿಲ್ಲ ಎಂದರೆ ಇಲ್ಲಿ ಒಬ್ಬರಿಗೊಬ್ಬರಿಗೆ ಲಿಂಕ್ ಇದೆ. ಹೊಡೆದವನೂ ಅವನೇ, ಅಲ್ಲಿ ಎನ್‌ಕ್ವೈರಿ ಮಾಡುವವನೂ ಅವನೇ, ಅವನ ಮೇಲಿನವರಿಗೆ ಕಂಪ್ಲೇಂಟ್ ಕೊಟ್ಟರೆ ಅವನೂ ಅದೇ ಕಮ್ಯುನಿಟಿಯವನೇ ಮತ್ತೆ ಅವನ ಮೇಲಿನವರಿಗೆ ಕಂಪ್ಲೇಂಟ್ ಕೊಟ್ಟರೆ ಅವನೂ ಅದೇ ಕಮ್ಯುನಿಟಿಯವನು.

ಈ ಹಿಂದೆ ತಮಗೂ ಗೊತ್ತಿದೆ ದೇವರಾಜ ಅರಸ್‌ರವರ ಕಾಲದಲ್ಲಾಗಲಿ, ಹಿಂದೆ ಯಾವ ಗವರ್ನಮೆಂಟ್ ಕಾಲದಲ್ಲೂ, ಹೆಗಡೆಯವರು ಇದ್ದಾಗ ಕೂಡ ನಮ್ಮ ಸರ್ಕಾರ ಇದ್ದಾಗ ಕೂಡ ವ್ಯತ್ಯಾಸ ಮಾಡಿದ್ದೆವು. ಎಸ್.ಪಿ. ಒಬ್ಬರು ಇದ್ದರೆ, ಡಿಸಿ ಒಬ್ಬರು ಅಥವಾ ಡಿವೈಎಸ್‌ಪಿ ಒಂದು ಕಮ್ಯುನಿಟಿಯವರು ಇದ್ದರೆ ಸರ್ಕಲ್ ಇನ್‌ಸ್ಪೆಕ್ಟರ್ ಇನ್ನೊಂದು ಕಮ್ಯುನಿಟಿಯವರು. ಹೀಗೆ ಹೆಚ್ಚು ಕಡಿಮೆ ಅಡ್ಮಿನಿಸ್ಟ್ರೇಷನ್‌ನಲ್ಲಿ ನ್ಯಾಯ ಸಿಗಲಿ ಎನ್ನತಕ್ಕಂತಹ ದೃಷ್ಟಿಯಿಂದ ಎಲ್ಲಾ ಜನರಿಗೆ ಮಿಕ್ಸ್ ಮಾಡಿ ಹಾಕುತ್ತೇವೆ. ನೀವು ಶಾಸಕರ ಒತ್ತಡಕ್ಕೆ, ಮಂತ್ರಿಗಳ ಒತ್ತಡಕ್ಕೆ ಎಲ್ಲಾ ಸಾರಾಸಗಟು ಒಂದು ಕಡೆ ಹಾಕುತ್ತಿರಿ. ನಾವು ಎಲ್ಲಿ ಹೋಗಿ ನ್ಯಾಯ ಕೇಳಬೇಕು, ಕಾಲು ಕಡಿಯುವವರೂ ಇವರೆ, ಕೈ ಕಡಿಯುವವರೂ ಇವರೇ. ಬೇಲ್ ಮೇಲೆ ಬಿಡಿಸಿಕೊಂಡು ಬರುವವರೂ ಇವರೇ. It is very unfortunate.

ಶ್ರೀ ಆರ್. ರೋಷನ್ ಬೇಗ್ : ಮಾನ್ಯ ಸಭಾಧ್ಯಕ್ಷರೆ, ಕೆಲವು ಐಟಂ ರೆಕವರ್ ಆಗಿದೆ, ಇನ್ನು ಕೆಲವು ಆದಷ್ಟು ಬೇಗ ರೆಕವರ್ ಮಾಡುತ್ತೇವೆಂದು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಆಶ್ವಾಸನೆ ಕೊಡುತ್ತೇನೆ. ಒಂದೇ ಜನಾಂಗದವರು ಒಂದು ಕಡೆ ಇರಬಾರದು ಎಂದು ಹೇಳುತ್ತಿದ್ದಾರೆ I totally agree with him. Any Government worth of its name, should not do it. ಸಾಮಾಜಿಕ ನ್ಯಾಯದ ಬಗ್ಗೆ ಮಾತನಾಡುವ ಸರ್ಕಾರ ಯಾವುದೂ ಇರಬಾರದು, ಈ ಒಂದು ಜಿಲ್ಲೆಯಲ್ಲಿ ಈ ತರಹ ಆಗಿದೆ, ಈ ಬಾರಿಯ ವರ್ಗಾವಣೆಯಲ್ಲಿ ನಾವು ಅದನ್ನು ಸರಿಪಡಿಸುತ್ತೇವೆ.

ಬಸ್‌ಪ್ರಯಾಣ ದರ ಹೆಚ್ಚು ಮಾಡಿದ ಸಂದರ್ಭದಲ್ಲಿ ಹಾಕಿರುವ ಕೇಸ್‌ಗಳನ್ನು ವಾಪಸ್ಸು ತೆಗೆದುಕೊಳ್ಳುವ ಬಗ್ಗೆ

ಶ್ರೀ ರಾಜಶೇಖರ ಶೀಲವಂತ (ಗುಳೇದಗುಡ್ಡ) : ಸನ್ಮಾನ್ಯ ಉಪಾಧ್ಯಕ್ಷರೆ, ಇಂದಿಗೆ ಒಂದು ವರ್ಷದ ಹಿಂದೆ 1997ರ ಮಾರ್ಚ್ ತಿಂಗಳಲ್ಲಿ ಬಸ್ ಪ್ರಯಾಣ ದರವನ್ನು ಹೆಚ್ಚು ಮಾಡಿದಂತಹ